ದಿನಾಂಕಃ 12.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಮೂಲಕಃ-</u> ಶ್ರೀ RIK ವಕೀಲರಿಂದಃ-**

ಇಂದು ನನ್ನ ಮೌಖಿಕ ಮುಖ್ಯ ವಿಚಾರಣೆ ಬದಲಿ ಈ ಪ್ರಮಾಣ ಪತ್ರ ಸಲ್ಲಿಸಿದ್ದು, ಇದರಲ್ಲಿ ಬರೆದ ವಿಷಯವನ್ನು ನಾನೇ ಹೇಳಿ ಬರೆಸಿದ್ದು, ಬರೆದ ವಿಷಯಗಳು ನಿಜ ಮತ್ತು ಸರಿ ಇದ್ದು, ನನಗೆ ಗೊತ್ತಿದೆ.

ನಾನು ಈ ದಸ್ತಾವೇಜನ್ನು ಹಾಜರ ಪಡಿಸುತ್ತಿದ್ದೇನೆ.

1) ಅಧಿಕಾರಪತ್ರವನ್ನು ನಿ ಆರ 1 ಎಂದು ಗುರುತಿಸಲಾಯಿತು.

2) ವಾಹನದ ಆರ್ ಸಿ ಬುಕ್ಕ , ಕೋಟೇಶನ ಮತ್ತು ವಿಮೆಯ ಪ್ರತಿಗಳನ್ನು ಹಾಜರು ಪಡಿಸಿದ್ದೇನೆ.

ತಕರಾರಿನಲ್ಲಿ ಕೇಳಿಕೊಂಡಂತೆ ಆದೇಶ ಮಾಡಬೇಕೆಂದು ವಿನಂತಿ.

**<u>ಪಾಟೀ ಸವಾಲುಃ-</u> ಅರ್ಜಿದಾರ ಪರ ಶ್ರೀ ಎಲ ಬಿ ಪಿ ವಕೀಲರಿಂದಃ-**

1 ಮತ್ತು 3ನೇ ಎದುರುದಾರರ ಮೇಲೆ ಅಳ್ನಾವರ ಪೋಲಿಸ ಠಾಣೆಯಲ್ಲಿ ಅಪಘಾತಕ್ಕೆ ಸಂಬಂಧಿಸಿದಂತೆ ಪ್ರಕರಣ ದಾಖಲಾಗಿದೆ ಅನ್ನುವ ವಿಷಯ ನನಗೆ ಗೊತ್ತಿದೆ. ಸದರಿ ಪ್ರಕರಣವು ಧಾರವಾಡದ ಜೆಎಮ ಎಫ ಸಿ ನ್ಯಾಯಾಲಯದಲ್ಲಿ ಸಿಸಿ ನಂಃ 29/2017 ಎಂದು ವಿಚಾರಣೆಗೆ ಬಾಕಿ ಇದೆ ಅನ್ನುವದು ಸರಿ. ನಾವು 1ನೇ ಎದುರುದಾರನ ವಾಹನಕ್ಕೆ ಇನ್ಸುರನ್ಸ ಮಾಡಿದ್ದೇವು ಅನ್ನುವದು ಸರಿ. 1ನೇ ಎದುರುದಾರನು 3ನೇ ಎದುರುದಾರನಿಗೆ ಚಾಲನಾಪತ್ರ ಇಲ್ಲದೇ ವಾಹನವನ್ನು ಚಲಾಯಿಸಲು ಕೊಟ್ಟಿದ್ದಕ್ಕೆ ನಾವು ಯಾವದೇ ಕ್ರಮ ತೆಗೆದುಕೊಂಡಿಲ್ಲ. 1ನೇ ಎದುರುದಾರನ

ವಾಹನಕ್ಕೆ ನಮ್ಮ ವಿಮಾ ಕಂಪನಿಯಿಂದ ಇನ್ಸುರನ್ಸ ಕೊಟ್ಟಿದ್ದಕ್ಕೆ ಸದರಿ ವಾಹನಕ್ಕೆ ಅಪಘಾತವಾದಲ್ಲಿ ನಾವು ಪರಿಹಾರ ಕೊಡಲು ಬಾದ್ಯಸ್ಥರಿದ್ದೇವೆ ಅನ್ನುವದು ಸರಿಯಲ್ಲ. 1ನೇ ಎದುರುದಾರನು ಪಾಲಿಸಿ ಷರತ್ತುಗಳನ್ನು ಉಲ್ಲಂಘನೆ ಮಾಡಿದ್ದಾನೆ ಎಂದು ಹೇಳುತ್ತಾರೆ. ಈ ಪ್ರಕರಣದಲ್ಲಿನ ಮೃತ ನಮ್ಮ ಕಂಪನಿಯ ಪಾಲಸಿಯ ಷರತ್ತುಗಳನ್ನು ಉಲ್ಲಂಘನೆ ಮಾಡಿಲ್ಲ. ಆದ್ದರಿಂದ ಮೃತನ ವಾರಸುದಾರರಿಗೆ ನಾವು ಪರಿಹಾರ ಕೊಡಲು ಬಾದ್ಯಸ್ಥರಿದ್ದೇವೆ ಅನ್ನುವದು ಸರಿಯಲ್ಲ. ಮೃತನ ವಾರಸುದಾರರಿಗೆ ಪರಿಹಾರ ಹಣ ಕೊಟ್ಟು ಅದನ್ನು 1ನೇ ಎದುರುದಾರನಿಂದ ವಸೂಲಿ ಮಾಡಿಕೊಳ್ಳಲು ನಮಗೆ ಯಾವದೇ ತೊಂದರೆ ಇಲ್ಲ ಅನ್ನುವದು ಸರಿಯಲ್ಲ. ಮೃತನ ವಾರಸದಾರರಿಗೆ ನಾವು ಪರಿಹಾರ ಕೊಡಬೇಕಾಗುತ್ತದೆ ಎಂದು 1ನೇ ಎದುರುದಾರ ವಿಮಾ ಷರತ್ತುಗಳನ್ನು ಉಲ್ಲಂಘಿಸಿದ್ದಾನೆಂದು ಸುಳ್ಳು ಹೇಳುತ್ತಿದ್ದೇನೆ ಅನ್ನುವದು ಸರಿಯಲ್ಲ. 1ನೇ ಎದುರುದಾರ ಯಾವದೇ ವಿಮಾ ಷರತ್ತುಗಳನ್ನು ಉಲ್ಲಂಘನೆ ಮಾಡದೇ ಇರುವ ಕಾರಣಕ್ಕೆ ನಾವು ಅವರ ಮೇಲೆ ಯಾವದೇ ಕ್ರಮ ತೆಗೆದುಕೊಂಡಿಲ್ಲ ಅನ್ನುವದು ಸರಿಯಲ್ಲ.

**ಮರು ವಿಚಾರಣೆಃ-** ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ ಅಂತಾ ಹೇಳುತ್ತಾರೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು ಹಾಗೂ ಸದಸ್ಯರು
ವಾಹನ ಅಪಘಾತ ಹಕ್ಕು ನ್ಯಾಯಾಧೀಕರಣ
ಚಿಕ್ಕೋಡಿ.